ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೮

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೇಳನೇ ಅಧಿವೇಶನ
## (ಮುಂದುವರೆದ ಉಪವೇಶನ)
## ಗುರುವಾರ, ದಿನಾಂಕ: ೨೬ನೇ ಮಾರ್ಚ್, ೨೦೧೫

---

### ಸಮೂಹ – IV

೧. ಮುಖ್ಯಮಂತ್ರಿಗಳು

೨. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

---

### ಉಡುಪಿ ಜಿಲ್ಲೆಯಲ್ಲಿನ ದೇವಾಲಯಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫೬ (೨೬೮೫) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಉಡುಪಿ ಜಿಲ್ಲೆಯಲ್ಲಿರುವ ವಿವಿಧ ದರ್ಜೆಯ ದೇವಾಲಯಗಳ ಒಟ್ಟು ಸಂಖ್ಯೆ ಎಷ್ಟು ಮತ್ತು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ವಿವಿಧ ದರ್ಜೆಯ ದೇವಾಲಯಗಳು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಉಡುಪಿ ಜಿಲ್ಲೆಯಲ್ಲಿ ಮುಜರಾಯಿ ಇಲಾಖಾ ವ್ಯಾಪ್ತಿಯಿಂದ ಹೊರಗಿರುವ ಪುರಾತನ ದೇವಾಲಯಗಳನ್ನು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ; ಇಲ್ಲವಾದಲ್ಲಿ, ಕಾರಣವೇನು ?

## ಆರಾಧನಾ ಯೋಜನೆಯಡಿಯಲ್ಲಿ ರಾಜ್ಯದಲ್ಲಿನ ದೇವಸ್ಥಾನಗಳ ಜೀರ್ಣೋದ್ಧಾರ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫೭ (೨೭೦೭) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೩-೧೪ ಮತ್ತು ೨೦೧೪-೧೫ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ರಾಜ್ಯದಲ್ಲಿನ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಬಿಡುಗಡೆ ಮಾಡಲಾದ ಅನುದಾನ ಎಷ್ಟು ; ಇದರಲ್ಲಿ ಬಳಕೆ ಮಾಡಿರುವ ಅನುದಾನವೆಷ್ಟು ; ಬಳಕೆ ಮಾಡದೆ ಬಾಕಿ ಉಳಿಸಿಕೊಂಡಿರುವ ಅನುದಾನವೆಷ್ಟು ? (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಆ) ಅನುದಾನ ಬಾಕಿ ಉಳಿಯಲು ಕಾರಣಗಳೇನು ?

## ಬಿ.ಬಿ.ಎಂ.ಪಿ. ಬಡಾವಣೆಗೆ ಕುಡಿಯುವ ನೀರು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೨೫೮ (೨೬೯೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಮಹಾನಗರ ಪಾಲಿಕೆಯ ೧೯೧ನೇ ವಾರ್ಡ್‌ನ ಕೂಡ್ಲು ಹಾಗೂ ಸಿಂಗಸಂದ್ರದಲ್ಲಿರುವ AECS ಬಡಾವಣೆಯ 'A Block' ನಿವಾಸಿಗಳು ಕುಡಿಯುವ ನೀರಿಗಾಗಿ ಹಾಹಾಕಾರಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) BBMPಗೆ ಹೊಸದಾಗಿ ಬಡಾವಣೆಗಳು ಸೇರ್ಪಡೆಗೊಂಡ ಅವಧಿಯಿಂದ ಈವರೆಗೆ ಸಾಕಷ್ಟು ಅನುದಾನಗಳು ಬಿಡುಗಡೆಯಾಗಿದ್ದರೂ, ಅಕ್ಕಪಕ್ಕದ ಬಡಾವಣೆಗಳಿಗೆ ಹಾಗೂ ಗ್ರಾಮಗಳಿಗೆ ನೀರು ಒದಗಿಸುವ ಕಾಮಗಾರಿ ಕೈಗೊಂಡಿದ್ದರೂ, ಈ ಬಡಾವಣೆಗೆ ನೀರು ಒದಗಿಸಲು ಯಾವೊಂದು ಕಾಮಗಾರಿಗಳನ್ನು ಕೈಗೊಂಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಹುದಿನಗಳಿಂದ ಕುಡಿಯುವ ನೀರಿಲ್ಲದೆ ಪರಿತಪಿಸುತ್ತಿರುವ ನಿವಾಸಿಗಳಿಗೆ ಶೀಘ್ರವಾಗಿ ನೀರು ಒದಗಿಸಲು ಸರ್ಕಾರ ಯಾವ್ಯಾವ ಕ್ರಮಗಳನ್ನು ಕೈಗೊಂಡಿದೆ; ಯಾವಾಗ ಕಾಮಗಾರಿಗಳು ಪ್ರಾರಂಭಗೊಂಡು ಯಾವಾಗ ಮುಕ್ತಾಯಗೊಳ್ಳಲಿವೆ?

## ಗುತ್ತಿಗೆ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಮತ್ತು ಸೌಲಭ್ಯ ಕಲ್ಪಿಸುವ ಕುರಿತು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫೯ (೨೭೨೫) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಯಾವುದೇ ರಕ್ಷಣಾತ್ಮಕ ಸಲಕರಣೆಗಳಿಲ್ಲದೇ ಬರಿಗೈಯಲ್ಲಿ ಮಲ ಮೂತ್ರ ಸ್ವಚ್ಛಗೊಳಿಸುವ ಗುತ್ತಿಗೆ ಪೌರ ಕಾರ್ಮಿಕರ ಬವಣೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದ ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರನ್ನು ಖಾಯಂಗೊಳಿಸುವ ಹಾಗೂ ಇತರೆ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಗುತ್ತಿಗೆ ಪೌರ ಕಾರ್ಮಿಕರ ಬೇಡಿಕೆಗಳಾದ ಸಮಾನ ಕೆಲಸಕ್ಕೆ ಸಮಾನ ವೇತನ, ಪ್ರತಿ ತಿಂಗಳು ೧ನೇ ತಾರೀಖಿನೊಳಗೆ ಸಂಸ್ಥೆಯ ಅಧಿಕೃತ ಪ್ರತಿನಿಧಿಯ ಸಮ್ಮುಖದಲ್ಲಿ ಚೆಕ್ ಮೂಲಕ ವೇತನ ಪಾವತಿ ಮತ್ತು ವೇತನ ವಿವರವುಳ್ಳ ಚೀಟಿಯನ್ನು ಸ್ಥಳದಲ್ಲೇ ನೀಡುವುದು, ವಾರಕ್ಕೆ ಒಂದು ಸಾರಿ ವೇತನ ಸಹಿತ ರಜೆ ನೀಡುವುದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಓವರ್ ಟೈಂ ವೇತನ ಜಾರಿ, ಮಲ ಹೊರುವ ಪದ್ಧತಿ ಕಡ್ಡಾಯ ನಿಷೇಧ, ಈ ಕಾರ್ಮಿಕರಿಗೆ ಬೋನಸ್, ಗ್ರ್ಯಾಚುಯಿಟಿ, ಭವಿಷ್ಯನಿಧಿ, ಆರೋಗ್ಯ ವಿಮೆ, ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಭೂ ಮಾಲೀಕರಿಗೆ ಬದಲಿ ನಿವೇಶನ ನೀಡಿರುವ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) –**

೨೬೦ (೨೬೯೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ ಹೋಬಳಿಯ ಗೆದ್ದಲಹಳ್ಳಿ ಗ್ರಾಮದ ಸರ್ವೆ ನಂ: ೨೪ ಅನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅರ್ಕಾವತಿ ಬಡಾವಣೆಗಾಗಿ ಭೂ ಸ್ವಾಧೀನಪಡಿಸಿಕೊಂಡಿರುವುದು ನಿಜವೇ; (ನಿಜವಿದ್ದಲ್ಲಿ, ಅಧಿಸೂಚನೆ ಪ್ರತಿ ನೀಡುವುದು)

(ಆ) ನಿಜವಿದ್ದಲ್ಲಿ, ಈ ಸರ್ವೆ ನಂಬರಿನ ಭೂಮಿಯನ್ನು ಡಿ–ನೋಟಿಫೈ ಮಾಡಲಾಗಿದೆಯೇ ; ಮಾಡಿದ್ದರೆ, ಅದಕ್ಕೆ ಕಾರಣವೇನು ;

(ಇ) ಈ ಭೂಮಿಯ ಮಾಲೀಕರುಗಳು ಯಾರು ; (ಸಂಪೂರ್ಣ ವಿವರ ನೀಡುವುದು)

(ಈ) ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಲ್ಲಿ, ಭೂ ಮಾಲೀಕರಿಗೆ ಪರಿಹಾರ ಬದಲಿ ನಿವೇಶನ ನೀಡಲಾಗಿದೆಯೇ ; ನೀಡದೆ ಇದ್ದರೆ, ಅದಕ್ಕೆ ಕಾರಣವೇನು; ನೀಡಿದ್ದರೆ, ಯಾರ್ಯಾರಿಗೆ ಯಾವ ಯಾವ ನಿವೇಶನ ನೀಡಲಾಗಿದೆ ? (ನಿವೇಶನಗಳ ಸಂಖ್ಯೆಯೊಂದಿಗೆ ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ ರಸ್ತೆ ಅಪಘಾತಗಳು

ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೨೬೧ (೨೭೦೫) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ದಿನೇದಿನೇ ರಸ್ತೆಗಳಲ್ಲಿ ಅಪಘಾತಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ೩ ವರ್ಷಗಳಿಂದ ನಡೆದ ಅಪಘಾತಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಹಾಗಿದ್ದಲ್ಲಿ, ಅಪಘಾತಗಳನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)

## ಮಾಜಿ ಸೈನಿಕರ ಕುಟುಂಬದ ಕಲ್ಯಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ

ಶ್ರೀ ಆರ್.ಕೆ. ಸಿದ್ಧರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೨೬೨ (೨೫೫೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಾಜಿ ಸೈನಿಕರು ಮತ್ತು ಅವರ ಕುಟುಂಬದ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು)

(ಆ) ಇವರುಗಳಿಗೆ ಹೊಸದಾಗಿ ಯಾವುದಾದರೂ ಕಲ್ಯಾಣ ಯೋಜನೆ ರೂಪಿಸಲು ಉದ್ದೇಶಿಸಲಾಗಿದೆಯೇ ; ಉದ್ದೇಶಿಸಿದ್ದಲ್ಲಿ, ಅವುಗಳ ವಿವರ ನೀಡುವುದು ;

(ಇ) ರಾಜ್ಯದಲ್ಲಿರುವ ಜಿಲ್ಲಾ ಸೈನಿಕ ಬೋರ್ಡ್ ಸಕ್ರಿಯವಾಗಿಸಲು ಯೋಜನೆ ರೂಪಿಸಲಾಗುತ್ತಿದೆಯೇ ; ಇದ್ದಲ್ಲಿ, ಅದರ ವಿವರ ನೀಡುವುದು ;

(ಈ) ಶಿವಮೊಗ್ಗದಲ್ಲಿರುವ ಜಿಲ್ಲಾ ಸೈನಿಕ ಬೋರ್ಡ್ ನಿಷ್ಕ್ರಿಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

(ಉ) ಶಿವಮೊಗ್ಗ ಜಿಲ್ಲಾ ಸೈನಿಕ ಬೋರ್ಡ್ ಹಾಲಿ ಉಪನಿರ್ದೇಶಕರ ಬಗ್ಗೆ ಸೈನಿಕ ಬೋರ್ಡ್ ಸದಸ್ಯರುಗಳಿಂದ ದೂರುಗಳೇನಾದರೂ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ಪಶುವೈದ್ಯ ಆಸ್ಪತ್ರೆ

ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –

೨೬೩ (೨೬೭೯) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆಯಲ್ಲಿ ಇರುವ ಒಟ್ಟು ಪಶುವೈದ್ಯ ಆಸ್ಪತ್ರೆಗಳೆಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ರಾಯಚೂರು ಜಿಲ್ಲೆಯು ನೀರಾವರಿ ಪ್ರದೇಶವಾಗಿದ್ದು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಜಾನುವಾರುಗಳನ್ನು ಸಾಕುತ್ತಿರುವುದರಿಂದ ಹೆಚ್ಚುವರಿ ಪಶು ಆಸ್ಪತ್ರೆಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ; (ಪೂರ್ಣ ವಿವರ ಒದಗಿಸುವುದು)

(ಇ) ರೈತರಿಗೆ ಹಸುಗಳನ್ನು ಖರೀದಿಸಲು ಹಣ ನೀಡುತ್ತಿದ್ದು, ಈ ಹಣವನ್ನು ಹಾಲು ಉತ್ಪಾದಕರ ಸಹಕಾರಿ ಸಂಘದ ಮುಖಾಂತರ ಹಸುಗಳನ್ನು ಖರೀದಿಸಲು ಧನಸಹಾಯ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಕಾಯಿಲೆಗಳಿಂದ ಮೃತಪಟ್ಟಿರುವ ಜಾನುವಾರುಗಳು

ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)–

೨೬೪ (೨೫೬೭) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯಲ್ಲಿ ಅನೇಕ ಕಾಯಿಲೆಗಳಿಂದ ಕುರಿ–ಆಡು ಮತ್ತು ಜಾನುವಾರುಗಳು ಮೃತಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಎಷ್ಟು ಜಾನುವಾರುಗಳು ಮೃತಪಟ್ಟಿವೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಮೃತಪಟ್ಟಿರುವ ಕುರಿ–ಆಡು (ಮೇಕೆ) ಜಾನುವಾರುಗಳ ವಾರುಸುದಾರರಿಗೆ ಸರ್ಕಾರದಿಂದ ನೀಡಿರುವ ಪರಿಹಾರಧನ ಎಷ್ಟು ; ನೀಡಿದ್ದಲ್ಲಿ, ವಾರಸುದಾರರ ಹೆಸರು ಹಾಗೂ ವಿಳಾಸದೊಂದಿಗೆ ಮಾಹಿತಿ ನೀಡುವುದು ;

(ಈ) ಪರಿಹಾರ ಮೊತ್ತವನ್ನು ಹೆಚ್ಚು ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ ? (ಮಾಹಿತಿ ಒದಗಿಸುವುದು)

### ಕೆಂಪೇಗೌಡ ಬಡಾವಣೆಗೆ ಸ್ವಾಧೀನಪಡಿಸಿಕೊಂಡ ಜಮೀನು

ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –

೨೬೫ (೨೭೨೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೆಂಪೇಗೌಡ ಬಡಾವಣೆಗೆ ಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು ; ಸ್ವಾಧೀನದ ನಂತರ ಕೈಬಿಟ್ಟ ಜಮೀನಿನ ವಿಸ್ತೀರ್ಣವೆಷ್ಟು ; ಕೈಬಿಡಲು ಕಾರಣಗಳೇನು ; (ವಿಸ್ತೀರ್ಣವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಬಡಾವಣೆಯಲ್ಲಿ ನಿರ್ಮಾಣ ಮಾಡುವ ನಿವೇಶನಗಳ ಸಂಖ್ಯೆ ಎಷ್ಟು ; (ನಿವೇಶನಗಳ ವಿಸ್ತೀರ್ಣವಾರು ಮಾಹಿತಿ ನೀಡುವುದು)

(ಇ) ನಿವೇಶನದ ಒಂದು ಅಡಿಗೆ ನಿಗದಿಪಡಿಸಿರುವ ದರವೆಷ್ಟು ; ರೈತರಿಗೆ ಪ್ರತಿ ಎಕರೆಗೆ ನೀಡುವ ಪರಿಹಾರವೆಷ್ಟು ? (ಮಾಹಿತಿ ನೀಡುವುದು)

### ಬಿ.ಬಿ.ಎಂ.ಪಿ. ವ್ಯಾಪ್ತಿಯ ರಸ್ತೆಗಳು

ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –

೨೬೬ (೨೫೯೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಸುಧಾಮನಗರ ವಾರ್ಡ್ ವ್ಯಾಪ್ತಿಯಲ್ಲಿರುವ ಚಿನ್ನಪ್ಪ ಗಾರ್ಡನ್ ಪಕ್ಕದಲ್ಲಿರುವ, ಜೆ.ಸಿ. ರಸ್ತೆಯಿಂದ ಲಾಲ್ ಬಾಗ್ ಪೋರ್ಟ್ ರಸ್ತೆಗೆ ಸಂಪರ್ಕ ಕಲ್ಪಿಸುತ್ತಿರುವ ರಸ್ತೆಯನ್ನು (೪೬೬ X ೩೦ ಅಡಿ) ಖಾಸಗಿಯವರಿಗೆ ಖಾತೆ ಮಾಡಿಕೊಟ್ಟಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ೧೯೭೪ ರಲ್ಲಿಯೇ ಆಗಿನ ಬೆಂಗಳೂರು ನಗರ ಸಭೆಯಲ್ಲಿ (ವಿಯಷ್ಟ:೯(೫೮೭) ದಿನಾಂಕ: ೨೩-೧೧-೧೯೭೪) ಮಹಾಪೌರರು, ಉಪ ಮಹಾಪೌರರು ಹಾಗೂ ನಗರಸಭಾ ಸದಸ್ಯರು ಇದನ್ನು ರಸ್ತೆಯೆಂದು ನಿರ್ಣಯ ತೆಗೆದುಕೊಂಡಿರುವುದು ನಿಜವೇ ;

(ಇ) ತದನಂತರ ೨೬-೦೭-೧೯೭೭ ರಲ್ಲಿ ಕಮೀಷನರ್ ನೋಟ್ NO. L1.PR/ ೩೬/೭೭-೭೮ನ ಪ್ರಕಾರ, ಬೆಂಗಳೂರು ಕಾರ್ಪೋರೇಷನ್ನಿನ ಆಡಳಿತಾಧಿಕಾರಿಗಳು ಸದರಿ ಜಾಗವನ್ನು ರಸ್ತೆ ನಿರ್ಮಾಣ ಮಾಡಲು ಆದೇಶಿಸಿ ಹಣ ಬಿಡುಗಡೆ ಮಾಡಲು ಸೂಚಿಸಿರುವುದು ನಿಜವೇ ;

(ಈ) ಸದರಿ ಜಾಗವನ್ನು ಸಾರ್ವಜನಿಕ ಉಪಯೋಗಕ್ಕೆ ಬಳಸುವಂತೆ ೦೧-೦೨-೧೯೭೭ರಲ್ಲಿ ಕರ್ನಾಟಕ ರಾಜ್ಯ ಪತ್ರ ಹೊರಡಿಸಿರುವುದು ನಿಜವೇ; ಪ್ರಸ್ತುತ ಸರ್ವೆ ನಕ್ಷೆಯಲ್ಲಿ ಹಾಗೂ ಬಿಬಿಎಂಪಿ ವಾರ್ಡ್ ೧೧೮ ರ ಮ್ಯಾಪ್‌ನಲ್ಲಿಯೂ ಸದರಿ ಜಾಗವನ್ನು ರಸ್ತೆಯೆಂದು ತೋರಿಸಿರುವುದು ನಿಜವೇ;

(ಉ) ಪ್ರಸ್ತುತ ಸದರಿ ರಸ್ತೆಯು ವಿ.ವಿ.ಪುರಂ ವಾರ್ಡಿನ ಹಾಗೂ ಸುಧಾಮನಗರದ ಸುಮಾರು ಸಾವಿರಾರು ಜನ ಸಾರ್ವಜನಿಕರಿಗೆ ಸಂಪರ್ಕ ರಸ್ತೆಯಾಗಿ ಉಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಇಷ್ಟಿದ್ದೂ, ಸದರಿ ರಸ್ತೆಯನ್ನು ಖಾಸಗಿಯವರಿಗೆ ಖಾತೆ ಮಾಡಿಕೊಟ್ಟಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು, ಖಾತೆಯನ್ನು ರದ್ದುಪಡಿಸಿ, ಸಾರ್ವಜನಿಕರ ಉಪಯೋಗಕ್ಕೆ ಅದನ್ನು ರಸ್ತೆಯಾಗಿಯೇ ಮುಂದುವರೆಸಲು ಸರ್ಕಾರ ಮುಂದಾಗುವುದೇ ; ಇಲ್ಲವಾದಲ್ಲಿ, ಕಾರಣವೇನು ?

## ಪೊಲೀಸ್ ಠಾಣೆಗಳಲ್ಲಿರುವ ವಾಹನಗಳ ವಿಲೇವಾರಿ

ಶ್ರೀ ಎಚ್.ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –

೨೬೭ (೨೭೨೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಅಪಘಾತಕ್ಕೆ ಒಳಗಾಗಿ ಹಾಗೂ ಇನ್ನಿತರ ಪ್ರಕರಣಗಳಲ್ಲಿ ವಶಪಡಿಸಿಕೊಳ್ಳಲಾದ ನಾಲ್ಕು ಚಕ್ರ ಹಾಗೂ ದ್ವಿ ಚಕ್ರ ವಾಹನಗಳ ಸಂಖ್ಯೆ ಎಷ್ಟು ;

(ಆ) ಅವುಗಳನ್ನು ಕೂಡಲೇ ವಿಲೇವಾರಿ ಅಥವಾ ಸಂಬಂಧಪಟ್ಟವರಿಗೆ ನೀಡಲು ಇರುವ ತಾಂತ್ರಿಕ ತೊಂದರೆಗಳನ್ನು ಪರಿಹರಿಸಿ ಯಾವಾಗ ನೀಡಲಾಗುವುದು; ಅಥವಾ ಯಾವಾಗ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗುವುದು ;

(ಇ) ಹಾಗೇಯೇ ಬೆಂಗಳೂರಿನಲ್ಲಿರುವ ಎಲ್ಲಾ ಪೋಲೀಸ್ ಠಾಣೆಗಳಲ್ಲಿ ವಶಪಡಿಸಿ ಕೊಳ್ಳಲಾಗಿರುವ ವಾಹನಗಳ ಸಂಖ್ಯೆ ಎಷ್ಟು ; (ಅವುಗಳನ್ನು ಯಾವಾಗ ವಿಲೇವಾರಿ ಮಾಡಲಾಗುವುದೆಂದು ನಿರ್ದಿಷ್ಟವಾಗಿ ತಿಳಿಸುವುದು)

(ಈ) ವರ್ಷಾನುಗಟ್ಟಲೆ ವಾಹನಗಳನ್ನು ಮಾಲೀಕರಿಗೆ ಹಿಂತಿರುಗಿಸದಿರುವುದರಿಂದ ಸದರಿ ವಾಹನಗಳು ಹಾಳಾಗುವುದರಿಂದ ಇದೊಂದು ರಾಷ್ಟ್ರೀಯ ಸ್ವತ್ತಿನ ಅಪವ್ಯಯವಾದಂತಾಗುವುದಿಲ್ಲವೆ ; ಈ ಬಗ್ಗೆ ಕೈಗೊಳ್ಳುವ ಕ್ರಮಗಳೇನು ?

## ಹೆಬ್ಬಾಳ ರಾಜಕಾಲುವೆ

ಡಾ. ಜಯಮಾಲ (ನಾಮನಿರ್ದೇಶನ ಹೊಂದಿದವರು) –

೨೬೮ (೨೭೦೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರಿನ ಹೆಬ್ಬಾಳದಲ್ಲಿ ರಾಜಕಾಲುವೆ ಒಳಗಡೆ ಜೀರೋ ಸೀವೆಜ್ ಲೈನ್ ಅಳವಡಿಸಿರುವ ಉದ್ದೇಶವೇನು ಹಾಗೂ ಅವುಗಳಿಗೆ ಸಾನಿಟರಿ ಲೈನ್ ಸಂಪೂರ್ಣವಾಗಿ ಕೊಡಲಾಗಿದೆಯೇ ;

(ಆ) ಸದರಿ ಕಾಮಗಾರಿ ಪ್ರಾರಂಭವಾದ ವರ್ಷ ಮತ್ತು ಅವುಗಳ ವಿಸ್ತೀರ್ಣವೆಷ್ಟು;

(ಇ) ಈವರೆಗೂ ಸದರಿ ಕಾಮಗಾರಿಯಲ್ಲಿ ಆದ ಕೆಲಸಗಳೆಷ್ಟು ಹಾಗೂ ಬಾಕಿ ಇರುವುದೆಷ್ಟು ?

## ಜಾಹಿರಾತು ಫಲಕ ಕುರಿತು

ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –

೨೬೯ (೨೫೫೨) ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಜಾಹಿರಾತು ಫಲಕಗಳ ಸಂಖ್ಯೆ ಎಷ್ಟು ;

(ಆ) ಇವುಗಳಲ್ಲಿ ಸರ್ಕಾರಿ ಜಾಹಿರಾತು ಫಲಕಗಳು ಹಾಗೂ ಖಾಸಗಿ ಜಾಹಿರಾತು ಫಲಕಗಳು ಎಷ್ಟು ;

(ಇ) ಜಾಹಿರಾತು ಫಲಕಗಳಿಂದ ವಾರ್ಷಿಕವಾರು ಬರುವ ಆದಾಯವೆಷ್ಟು ;

(ಈ) ಜಾಹಿರಾತು ಫಲಕಗಳಿಗೆ ಶುಲ್ಕವನ್ನು ವಿಧಿಸುವಾಗ ಅನುಸರಿಸುವ ಮಾನದಂಡಗಳೇನು ;

(ಉ) ಜಾಹಿರಾತು ಫಲಕಗಳನ್ನು ಯಾವ-ಯಾವ ಸ್ಥಳಗಳಲ್ಲಿ ಅಳವಡಿಸಬೇಕೆಂದು ನಿಯಮಾವಳಿಗಳನ್ನು ರೂಪಿಸಲಾಗಿದೆ ; (ವಿವರ ನೀಡುವುದು)

(ಊ) ಅನಧಿಕೃತ ಜಾಹಿರಾತು ಫಲಕಗಳ ಸಂಖ್ಯೆ ಎಷ್ಟು ; ಇವುಗಳನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಋ) ಬೆಂಗಳೂರು ಮಹಾನಗರ ಪಾಲಿಕೆಗೆ ಮೋಸ ಮಾಡಿ ಜಾಹಿರಾತುಗಳನ್ನು ನಡೆಸುತ್ತಿರುವ ಮಾಫಿಯಾದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ ;

(ಎ) ಇದರಿಂದ ಸರ್ಕಾರಕ್ಕೆ ವಾರ್ಷಿಕವಾಗಿ ಆಗುತ್ತಿರುವ ನಷ್ಟ ಎಷ್ಟು ;

(ಏ) ಇದಕ್ಕೆ ಕಾರಣ ಆದವರ ಹೆಸರು, ಅವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು;

(ಐ) ಜಾಹಿರಾತುಗಳ ನಿರ್ವಹಣೆಗೆ ಸಮಗ್ರ ಜಾಹಿರಾತು ನೀತಿ (ಬಿ.ಬಿ.ಎಂ.ಪಿ.ಗೆ ಸಂಬಂಧಿಸಿದಂತೆ)ಯನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

## ಕರ್ನಾಟಕ ಸರ್ಕಾರದ ಸಚಿವಾಲಯ ಕ್ಲಬ್‌ನಲ್ಲಿ ವಿಧಾನಮಂಡಲದ ಅಧಿಕಾರಿ / ನೌಕರರಿಗೆ ಸದಸ್ಯತ್ವದ ನಿರಾಕರಣೆ

**ಶ್ರೀ ಗೋ. ಮಧುಸೂದನ (ಪದವೀಧರರ ಕ್ಷೇತ್ರ) –**

೨೭೦ (೨೬೭೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ಸರ್ಕಾರದ ಸಚಿವಾಲಯದ ಕ್ಲಬ್‌ಅನ್ನು ಯಾವ ಉದ್ದೇಶಕ್ಕಾಗಿ ಸ್ಥಾಪಿಸಲಾಗಿತ್ತು ; (ಪ್ರತಿಯನ್ನು ಒದಗಿಸುವುದು)

(ಆ) ಸದರಿ ಕ್ಲಬ್‌ಗೆ ಸರ್ಕಾರ ನೀಡುವ ವಾರ್ಷಿಕ ಅನುದಾನ ಎಷ್ಟು ;

(ಇ) ಕ್ಲಬ್‌ನಲ್ಲಿ ಸಚಿವಾಲಯ ಸಿಬ್ಬಂದಿಯನ್ನು ಹೊರತುಪಡಿಸಿ, ಹೊರಗಿನವರಿಗೆ ಅಕ್ರಮವಾಗಿ ಮತ್ತು ಇಚ್ಛೆ ಬಂದಂತೆ ಶಾಶ್ವತ ಸದಸ್ಯತ್ವ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರಗಳನ್ನು ಒದಗಿಸುವುದು)

(ಈ) ವಿಧಾನಮಂಡಲದ ಅಧಿಕಾರಿಗಳು/ನೌಕರರಿಗೆ ಶಾಶ್ವತ ಸದಸ್ಯತ್ವವನ್ನು ನಿರಾಕರಿಸುವುದಕ್ಕೆ ಕಾರಣಗಳೇನು ;

(ಉ) ಸದರಿ ಕ್ಲಬ್‌ನಲ್ಲಿ ಶಾಶ್ವತ ಸದಸ್ಯತ್ವವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಸಚಿವಾಲಯದ ಸಿಬ್ಬಂದಿಗೆ ಸರಿಸಮನಾಗಿ ವಿಧಾನಮಂಡಲದ ನೌಕರರನ್ನು ಪರಿಗಣಿಸದಿರಲು ಕಾರಣವೇನು ;

(ಊ) ವಿಧಾನಮಂಡಲದ ನೌಕರರಿಗೆ ಕೂಡಲೇ ಶಾಶ್ವತ ಸದಸ್ಯತ್ವವನ್ನು ನೀಡುವಂತೆ ಸರ್ಕಾರವು ಕ್ಲಬ್‌ನ ಆಡಳಿತ ಮಂಡಳಿಗೆ ನಿರ್ದೇಶನವನ್ನು ನೀಡುವುದೇ ?

ಪಿ. ಶ್ರೀಶ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ7, ಕಾ.ಸೂ. 1265, ಪ್ರತಿಗಳು 750